## ನಿಂಬೆಯ ಗಿಡದಲಿ ಗುಲಾಬಿ

ಮನೆ ಮುಂದಿನ ನಿಂಬೆ ಗಿಡದ ಮೇಲೆ ಗುಲಾಬಿ ಹೂವು ಅರಳಿದ್ದನ್ನು ನೋಡಿ ಆಶ್ಚರ್ಯವಾಯಿತು. ಅರೆ ಅದು ಹೇಗೆ ಸಾಧ್ಯ ಅಂತ ಹತ್ತಿರ ಹೋಗಿ ನೋಡಿದರೆ, ಗಿಡದ ಬುಡದಲ್ಲಿ ಇದ್ದ ಗುಲಾಬಿ ಸಸಿ ದೊಡ್ಡದಾಗಿ ತನ್ನ ಒಂದು ರೆಂಬೆಯನ್ನು ನಿಂಬೆ ಗಿಡದ ಎತ್ತರಕ್ಕೆ ಬೆಳಸಿ ಹೂವು ಅರಳಿಸಿತ್ತು. ಅಷ್ಟು ಕೊಂಬೆಗಳನ್ನು ದಾಟಿ ಮೇಲೆ ಹೂವು ಅರಳಿದ್ದನ್ನು ನೋಡಿ ಖುಷಿಯಾಯಿತು. ಎಷ್ಟೇ ಅಡಚಣೆಗಳಿರಲಿ, ಮನಸ್ಸು ಮಾಡಿದರೆ ಎಷ್ಟು ಎತ್ತರಕ್ಕಾದರೂ ಏರಬಹುದು ಎಂಬುದಕ್ಕೆ ಉದಾಹರಣೆಯಂತೆ ಕಂಡಿತು ಈ ದೃಶ್ಯ.

—ನರಸಿಂಹಾರೆಡ್ಡಿ ಯಂಕಮೊಳ, ಸೇಡಂ





## ಪೆಡಂಭೂತ!

ಪ್ರಕೃತಿಯಲ್ಲಿ ಮರ, ಬಳ್ಳಿಗಳೂ ಸಹ ಕೆಲವೊಮ್ಮೆ ಅಸಹಜ ಆಕೃತಿ ಹಾಗೂ ಬಣ್ಣಗಳಿಂದ ನೋಡುಗರ ಗಮನ ಸೆಳೆಯುತ್ತವೆ. ಇಂತಹ ಅಸಹಜತೆ ಕೆಲವೊಮ್ಮೆ ಮನಸ್ಸಿಗೆ ಮುದನೀಡಿದರೆ, ಕೆಲವೊಮ್ಮೆ ಹೆದರಿಕೆಯನ್ನುಂಟು ಮಾಡುವಂತಿರುತ್ತದೆ.

ಸಂಡೂರಿನ ಭುಜಂಗ ನಗರ ಬಳಿಯಿರುವ ಸುಮಾರು 30 ಅಡಿ ಎತ್ತರದ ಮರವೊಂದಕ್ಕೆ ಕಾಡು ಜಾತಿಯ ಬಳ್ಳಿ ಹಬ್ಬಿಕೊಂಡಿದೆ. ಒಂದು ಕೋನದಲ್ಲಿ ನೋಡಿದರೆ ಬೃಹತ್ ಗಾತ್ರದ ಪಕ್ಷಿಯಂತೆ, ಮತ್ತೊಂದು ಕೋನದಲ್ಲಿ ನೋಡಿದರೆ, ಪೆಡಂಭೂತದಂತೆ ಕಾಣುವ 'ತರುಲತೆಗಳ' ನೈಸರ್ಗಿಕ ಆಕೃತಿಯನ್ನು ಕಂಡು ಕೆಲವರು ಅಚ್ಚರಿಗೊಂಡರೆ, ರಾತ್ರಿ ಸಮಯದಲ್ಲಿ ಪ್ರಯಾಣಿಸುವ ದ್ವಿಚಕ್ರ ವಾಹನ ಸವಾರರು ಈ 'ಪೆಂಡಂಭೂತವನ್ನು' ಕಂಡು ಹೆದರಿದ್ದೂ ಉಂಟು.

—ಜಿ. ನಾಗೇಂದ್ರ, ಸಂಡೂರು

## ಮಟ್ಟಿ ಗುಳ್ಳದ ದೋಣಿ

ಕರಾವಳಿ ಜಿಲ್ಲೆಗಳು ಧಾರ್ಮಿಕ ಕ್ಷೇತ್ರಗಳು ಭಕ್ತರ ಮನಸ್ಸಿನಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿವೆ. ಇಲ್ಲಿನ ಬಹುತೇಕ ದೇವಾಲಯಗಳಲ್ಲಿ ಪ್ರತಿ ನಿತ್ಯವೂ ಯಾವುದಾದರೊಂದು ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತಿರುತ್ತವೆ. ವರ್ಷಾವಧಿ ಜಾತ್ರೆ, ಬ್ರಹ್ಮಕಳಶ ಮುಂತಾದ ವಿಶೇಷ ಸಂದರ್ಭಗಳಲ್ಲಿ ಭಕ್ತರು ಪಾಲ್ಗೊಂಡು ಉತ್ಸವಗಳನ್ನು ಯಶಸ್ವಿಗೊಳಿಸುತ್ತಾರೆ. ಈ ಸಂದರ್ಭಗಳಲ್ಲಿ ಬರುವ ಭಕ್ತರಿಗಾಗಿ ಪ್ರತಿನಿತ್ಯವೂ ಸಾರ್ವಜನಿಕ ಅನ್ನ ಸಂತರ್ಪಣೆಯನ್ನು ಏರ್ಪಡಿಸುತ್ತಾರೆ. ಸಂತರ್ಪಣೆ ಹಾಗೂ ಪೂಜಾ ಕಾರ್ಯಕ್ರಮಗಳಿಗೆ ಭಕ್ತರು ಕೊಡಲು ಬಯಸುವ ವಸ್ತುಗಳನ್ನು ಹೊರೆ ಕಾಣಿಕೆ ಮೂಲಕ ದೇವಾಲಯಕ್ಕೆ ಅರ್ಪಿಸುತ್ತಾರೆ. ಹೀಗೆ ಬಂದ ಹೊರೆ ಕಾಣಿಕೆಯನ್ನು ಉಗ್ರಾಣದಲ್ಲಿ ಸಂಗ್ರಹಿಸಿ ಭಕ್ತರ ವೀಕ್ಷಣೆಗೆ ಮುಕ್ತವಾಗಿರಿಸಿರುತ್ತಾರೆ.

ಮಂಗಳೂರಿನ ಕುಡುಪು ಗ್ರಾಮದಲ್ಲಿರುವ ಶ್ರೀಅನಂತಪದ್ಮನಾಭ ದೇವಾಲಯದ ಬ್ರಹ್ಮ ಕಳಶೋತ್ಸವ ಸಂದರ್ಭದಲ್ಲಿ ಮಟ್ಟಿ ಲಕ್ಷ್ಮೀ ನಾರಾಯಣ ರಾವ್ ಮತ್ತು ಕುಟುಂಬದವರು ಹೊರೆ ಕಾಣಿಕೆಯಾಗಿ ದೇವಾಲಯಕ್ಕೆ ನೀಡಿದ ಮಟ್ಟಿ ಗುಳ್ಳಗಳಿಂದ ತುಂಬಿರುವ ದೋಣಿಯನ್ನೇ ಕಾಣಿಕೆಯಾಗಿ ನೀಡಿರುತ್ತಾರೆ. ಉಗ್ರಾಣದಲ್ಲಿರುವ ಹೊರೆ ಕಾಣಿಕೆಯನ್ನು ವೀಕ್ಷಿಸಲು ಬಂದ ಭಕ್ತರ ಗಮನ ಸೆಳೆಯುವಲ್ಲಿ 'ಮಟ್ಟಿ ಗುಳ್ಳದ ದೋಣಿ' ಯಶಸ್ವಿಯಾಯಿತು

—ಕೆ. ಶ್ರೀಧರ, ಚಿಂತಾಮಣಿ

